
# ಶ್ರೀರಾಮಕೃಷ್ಣರ ದಿವ್ಯಲೀಲಾಕಾರ್ಯಗಳು

ಡಾ. ಕೆ. ಅನಂತರಾಮು



**ಅ**ವತಾರ ಎಂಬ ಶಬ್ದಕ್ಕೆ 'ಇಳಿದು ಬರುವುದು' ಎಂಬುದು ರೂಢಿಯ ಅರ್ಥ. ನಿರಾಕಾರ ಪರಮಾತ್ಮನ ಅನಂತಶಕ್ತಿಯ ದಿವ್ಯ ಕಿರಣವೊಂದು ಸಾಕಾರಗೊಂಡು ತೋರಿಕೊಳ್ಳುವ ಮಹಿಮಾ ವಿಶೇಷವನ್ನು ಅವತಾರ ಎನ್ನಬಹುದು. ಅಲೌಕಿಕ ನೆಲೆಯಿಂದ ಲೌಕಿಕ ನೆಲೆಗೆ ಬರುವುದು ಒಂದರ್ಥದಲ್ಲಿ ಇಳಿಕೆಯೇ ಸರಿ. "ಧರ್ಮವು ಕುಗ್ಗಿ ಕುಸಿದು, ಅಧರ್ಮಕ್ಕೇ ಕೋಡು ಮೂಡಿದ ದುಷ್ಕಾಲವು ಪ್ರಾಪ್ತವಾದಾಗಲೆಲ್ಲ ನಾನು ಅವತರಿಸುತ್ತೇನೆ. ಹಾಗೆ ಅವತರಿಸಿ ದುಷ್ಟರನ್ನು ಸದೆಬಡಿಯುತ್ತೇನೆ, ಸಜ್ಜನರನ್ನು ಸಂರಕ್ಷಿಸಿ ಧರ್ಮವನ್ನು ಎತ್ತಿಹಿಡಿಯುತ್ತೇನೆ" ಎಂದು ಭಗವದ್ಗೀತೆಯಲ್ಲಿ (೪–೭) ಶ್ರೀಕೃಷ್ಣನೇ ಅವತಾರದ ಉದ್ದೇಶವನ್ನು ಸೂಚಿಸಿದ್ದಾನೆ. ಅವತಾರಿಯು ಹರಿಯಬಿಟ್ಟ ಲೀಲಾಪ್ರಸಂಗಗಳನ್ನೆಲ್ಲ ಕಣ್ಣಾರೆ ಕಾಣುವ ಅಥವಾ ಕಿವಿಯಾರೆ ಕೇಳುವ ಸೌಕರ್ಯವು ದೊರೆತು, ಮಾನವನು ಧರ್ಮದ ಹಾದಿಯನ್ನು ಹಿಡಿಯಲು ಪ್ರೇರಣೆ ಲಭ್ಯವಾಗುತ್ತದೆ. **"ಮೇಲಿನ ಸ್ವರ್ಗಲೋಕವನ್ನು ಭೂಮಿಗೆ ಇಳಿಸಿ ತರುವವನೇ ಅವತಾರಿ"** ಎಂದು ಸ್ವಾಮಿ ತ್ಯಾಗೀಶಾನಂದರು (ಯುಗಯಾತ್ರೀ ಭಾರತೀಯ ಸಂಸ್ಕೃತಿ, ಭಾಗ ೩, ಪು. ೧೯೭) ಅವತಾರ ಶಬ್ದಕ್ಕೊಂದು ಹೊಸ ತಿರುವು ನೀಡಿದ್ದಾರೆ.

ಪರಬ್ರಹ್ಮನು ಮಹಾವಿಷ್ಣುವಾಗಿ ಎತ್ತಿದ ಅವತಾರಗಳು ಪ್ರಧಾನವಾಗಿ ಹತ್ತು ಎಂಬ ಹಿನ್ನೆಲೆಯಲ್ಲಿ 'ದಶಾವತಾರ' ಎಂಬ ಮಾತು ಪ್ರಚಲಿತವಾಗಿದ್ದರೂ, ಭಾಗವತ ಮಹಾಪುರಾಣದಲ್ಲಿ (೧–೩–೨೭) ಇಪ್ಪತ್ತೆರಡು ಅವತಾರಗಳ ನಿರೂಪಣೆಯಿದೆ. ಅಗಾಧ ಜಲರಾಶಿಯುಳ್ಳ ಮಹಾಸರೋವರದಿಂದ ಸಾವಿರಾರು ಕಾಲುವೆಗಳು ಹೊರಟು ಪ್ರವಹಿಸುವಂತೆ, ಸತ್ವನಿಧಿಯಾದ ಮಹಾವಿಷ್ಣುವಿನಿಂದ ಅಸಂಖ್ಯಾತ ಅವತಾರಗಳು ಉಂಟಾಗುತ್ತವೆಯೆಂದೂ ಅಲ್ಲಿಯೇ ಹೇಳಿದೆ. ಶಿವಮಹಾದೇವನು ಲೋಕ ಕಲ್ಯಾಣಕ್ಕಾಗಿ ಎತ್ತಿದ ಅವತಾರಗಳನ್ನು 'ಪಂಚವಿಂಶತಿ ಲೀಲೆಗಳು' (ಇಪ್ಪತ್ತೈದು) ಎಂದು ಪ್ರಸಿದ್ಧಪಡಿಸಲಾಗಿದೆ. ಸ್ಕಾಂದಪುರಾಣ, ಶಿವಪುರಾಣ, ಲಿಂಗಪುರಾಣಾದಿಗಳಲ್ಲಿ ಅವುಗಳ ವರ್ಣನೆಯಿದೆ.

ಶ್ರೀರಾಮಕೃಷ್ಣರು ತಮ್ಮ ಅವತಾರ ಕಾಲದಲ್ಲಿ ಮಾಡಿದ ದಿವ್ಯ ಕರ್ಮಗಳ ಮಹತ್ವವೇನು? ಅವುಗಳು ಹೇಗೆ ಚಾರಿತ್ರಿಕ ಪ್ರಾಮುಖ್ಯವನ್ನು ಹೊಂದಿವೆ? – ಇವುಗಳನ್ನು ಪಾಂಡಿತ್ಯಪೂರ್ಣವಾಗಿ ವಿಶ್ಲೇಷಿಸಿರುವ ಮಾನ್ಯ ಲೇಖಕರು ನಿವೃತ್ತ ಕನ್ನಡ ಪ್ರಾಧ್ಯಾಪಕರು, ಹೆಸರಾಂತ ಭಾಷಣಕಾರರು ಮತ್ತು ಸಂಶೋಧಕರು.

## ದುಷ್ಟದಮನದ ಕಾರ್ಯ

ದುಷ್ಟರನ್ನು ನಾಶಪಡಿಸುವುದೇ ಅವತಾರದ ಉದ್ದೇಶವಾದರೂ ಅದು ದುಷ್ಟರನ್ನು ಉದ್ಧಾರ ಮಾಡುವ ಮಹತ್ಕಾರ್ಯವೂ ಆಗಿದೆ. ದುಷ್ಟರಲ್ಲಿರುವ ದುಷ್ಟಸ್ವಭಾವವನ್ನು ಹೋಗಲಾಡಿಸಿ ಶುದ್ಧೀಕರಿಸುವುದರ ಸಾಂಕೇತಿಕ ಕಾವ್ಯಮಯ ವರ್ಣನೆಯೇ **'ದುಷ್ಟನಾಶನ'**ವೆಂದು ತಿಳಿಯಬೇಕು. ಇಲ್ಲಿ ದುಷ್ಟರು ತಮ್ಮ ದುಶ್ಚರಿತಗಳನ್ನು ನೀಗಿಕೊಂಡು ಸತ್ಪುರುಷರಂತೆಯೇ ತಮ್ಮ ಸಹಜ ಸ್ವರೂಪಕ್ಕೆ ಹಿಂತಿರುಗುತ್ತಾರಾದ್ದರಿಂದ ಅವರೂ ರಕ್ಷಿಸಲ್ಪಡುತ್ತಾರೆ. ಶ್ರೀರಾಮಕೃಷ್ಣರ ಅವತಾರ ವೈಶಿಷ್ಟ್ಯಕ್ಕೂ ಈ ಮಾತು ಚೆನ್ನಾಗಿ ಒಪ್ಪುತ್ತದೆ. ಪುರಾಣಾವತಾರಿಗಳು ಮಾಡಿದಂತೆ ಪರಮಹಂಸರು ಯಾರನ್ನೂ ನಿಗ್ರಹಿಸಲಿಲ್ಲವಲ್ಲ ಎಂಬ ಪ್ರಶ್ನೆಗೆ ಇಲ್ಲಿ ಉತ್ತರ ಸಿಗುತ್ತದೆ. ಅವರು ತಮ್ಮ ಅಪೂರ್ವವಾದ ಸ್ಪರ್ಶ ಮಾತ್ರದಿಂದಲೇ ಹಲವರಲ್ಲಿ ಆಧ್ಯಾತ್ಮಿಕ ಶಕ್ತಿಯ ಸಂಚಲನವಾಗುವಂತೆ ಮಾಡಿದರು. ಕೆಲವೊಮ್ಮೆ ಅವರ ಬಳಿಗೆ ದುರ್ಜನರೂ ಬರುತ್ತಿದ್ದರು. ಪರಮಹಂಸರಾದರೋ ನಿರ್ಮಲಾಂತಃಕರಣದಿಂದ ದಿವ್ಯಭಾವದಲ್ಲಿ ಅವರನ್ನು ಸ್ಪರ್ಶಿಸುತ್ತಿದ್ದರು. ಅದರ ಫಲವಾಗಿ ಆ ದುರ್ಜನರು ಸಂಪೂರ್ಣವಾಗಿ ಬದಲಾವಣೆ

ಗೊಂಡು, ಸನ್ಮಾರ್ಗವನ್ನು ಹಿಡಿದು ಹೊಸ ಜೀವನವನ್ನೇ ಆರಂಭಿಸುತ್ತಿದ್ದರು. ಇಂತಹ ಸಂಗತಿಗಳು ಪರಮಹಂಸರು ಅವತಾರಪುರುಷರೆಂಬ ನಂಬುಗೆಯನ್ನು ನಮ್ಮಲ್ಲಿ ಮೂಡಿಸುತ್ತಿದ್ದುವು ಎಂದು ಸ್ವಾಮಿ ಶಾರದಾನಂದರು ಬರೆದಿದ್ದಾರೆ (ಶ್ರೀರಾಮಕೃಷ್ಣ ಲೀಲಾಪ್ರಸಂಗ, ಭಾಗ ೨, ಪು. ೧೬೧).

### ದಿವ್ಯಾನುಭವಗಳು

ಅವತಾರಪುರುಷರು ತೋರಿಕೊಳ್ಳುವ ಕಾಲದಲ್ಲಿ ಅವರ ತಂದೆತಾಯಿಗಳಿಗೆ ದಿವ್ಯಾನುಭವಗಳಾಗುತ್ತವೆ. ಪರಮಹಂಸರ ತಂದೆ ಕ್ಷುದಿರಾಮನು ತೀರ್ಥಯಾತ್ರಾಕಾಲದಲ್ಲಿ ಗಯಾಕ್ಷೇತ್ರದಲ್ಲಿ ದಿವ್ಯಸ್ವಪ್ನವೊಂದನ್ನು ಕಂಡನು. ಆ ಸ್ವಪ್ನದಲ್ಲಿ ಗಯಾಕ್ಷೇತ್ರದ ಅಧಿದೈವ ಗದಾಧರ ಮಹಾವಿಷ್ಣುವು "ನಿನ್ನ ಭಕ್ತಿಯಿಂದ ನಾನು ಪ್ರಸನ್ನನಾಗಿದ್ದೇನೆ, ಕ್ಷುದಿರಾಮ. ಪುತ್ರರೂಪದಲ್ಲಿ ನಾನು ನಿನ್ನ ಮನೆಯಲ್ಲಿ ಅವತರಿಸಿ ನಿನ್ನ ಸೇವೆಯನ್ನು ಸ್ವೀಕರಿಸುತ್ತೇನೆ" ಎಂದು ಅಭಯವಿತ್ತನು. ಅದೇ ಪರಿಯಲ್ಲಿ ಪರಮಹಂಸರ ತಾಯಿ ಚಂದ್ರಮಣಿದೇವಿ ಕೂಡ ದಿವ್ಯದರ್ಶನಗಳನ್ನು ಕಂಡಳು. ಶಿವನ ದೇವಾಲಯದಿಂದ ಅಲೆಯಲೆಯಾಗಿ ಹರಿದುಬಂದ ದಿವ್ಯಜ್ಯೋತಿಯು ತನ್ನ ದೇಹವನ್ನು ಪ್ರವೇಶಿಸುವುದನ್ನು ಅವಳು ಕಂಡು ಮೂರ್ಛೆಹೋದಳು. ಮತ್ತೊಮ್ಮೆ ಅವ್ಯಕ್ತ ದಿವ್ಯವಾಣಿಯೊಂದನ್ನು ಆಲಿಸಿ ವಿಸ್ಮಯಾಭಿಭೂತಳಾದಳು. ಆಗ ಚಂದ್ರಮಣಿದೇವಿಗೆ ನಲವತ್ತೈದು ವಯಸ್ಸು. "ಈ ವಯಸ್ಸಿನಲ್ಲಿ ಗರ್ಭವತಿಯಾಗಿಯೂ ಎಂತಹ ರೂಪ ಇವಳದು! ಈ ಬಾರಿ ಇವಳು ಹೆರಿಗೆಯ ಹೊತ್ತಿನಲ್ಲಿ ಸಾವನ್ನಪ್ಪಬಹುದು" ಎಂದು ನೆರೆಹೊರೆಯ ಹೆಂಗಳೆಯರು ಮಾತನಾಡಿಕೊಳ್ಳುತ್ತಿದ್ದರು. ಈ ಅವತಾರವರಿಷ್ಠರ ಗರ್ಭಾವತರಣವೇ ಲೋಕಸಾಮಾನ್ಯರಲ್ಲಿ ಅಂತಹ ಆನಂದವನ್ನುಂಟುಮಾಡುತ್ತಿತ್ತು. ಜ್ಯೋತಿಷಿಗಳು ಕೂಡ "ಈ ಮಗು ನಾರಾಯಣಾಂಶಸಂಭೂತನೆಂದು ಲೋಕಪ್ರಸಿದ್ಧನಾಗಿ, ಹೊಸಧರ್ಮಪ್ರವರ್ತಕನಾಗಿ ಎಲ್ಲರ ಪೂಜೆಗೆ ಪಾತ್ರನಾಗುತ್ತಾನೆ" ಎಂದು ನುಡಿದಿದ್ದರು.

ಪರಮಹಂಸರು ಉದಿಸಿದ ಮೇಲೂ ಹೀಗೆ ಅಚ್ಚರಿಗಳು ಕಾಣಿಸಿಕೊಳ್ಳುತ್ತಿದ್ದುವು. ತೊಟ್ಟಿಲಲ್ಲಿ ಮಲಗಿದ ಕೂಸು ಅಪರಿಚಿತ ದೀರ್ಘಕಾಯದ ವ್ಯಕ್ತಿಯಂತೆ ಒಮ್ಮೊಮ್ಮೆ ಕಾಣಿಸಿಕೊಂಡು ಚಂದ್ರಮಣಿದೇವಿಯು ದಿಗ್ಭ್ರಾಂತಳಾಗಿಬಿಡುತ್ತಿದ್ದಳು. ಒಮ್ಮೆ ಎತ್ತಿಕೊಳ್ಳಲು ಹೋದಾಗ ಮಗು ಬೆಟ್ಟದಷ್ಟು ಭಾರವಾಗಿ ತೋರಿದರೆ, ಮತ್ತೊಮ್ಮೆ ಮಲ್ಲಿಗೆಯಂತೆ ಹಗುರವಾಗಿಬಿಡುತ್ತಿತ್ತು.

### ಆಕಿಂಚನ್ಯವೇ ಪ್ರಿಯವಾದುದು

ಅವತಾರಿಗಳು ಸಿರಿಸಂಪದಗಳಿಗಿಂತ ಮಿಗಿಲಾಗಿ ಬಡತನದ ಕುಟುಂಬಗಳಿಂದ ಉದಿಸಿ ಬಂದಿದ್ದಾರೆ. ಭಕ್ತಿ, ವೈರಾಗ್ಯ, ತ್ಯಾಗ, ಪರೋಪಕಾರ, ಕರುಣೆ, ಮಾರ್ದವತೆ ಮುಂತಾದ ಸದ್ಗುಣಗಳ ಭಂಡಾರವನ್ನು ಅವರು ಸೂರೆಮಾಡಿದ್ದಾರೆ. ಶ್ರೀರಾಮಕೃಷ್ಣರೂ ಅಷ್ಟೆ, ತಾವು ನೆರವೇರಿಸಬೇಕಾಗಿದ್ದ ಲೋಕೋದ್ಧಾರಕ ಕಾರ್ಯಗಳಿಗೆ ಪ್ರೇರಕವಾಗುವಂತಹ ಸುಸಂಸ್ಕೃತ ಬಡ ಕುಟುಂಬವನ್ನೇ ಆಯ್ದುಕೊಂಡರು.

**ಶ್ರೀರಾಮಕೃಷ್ಣರು ಇಂದಿನ ನಾಗರಿಕತೆಯ ಬಗ್ಗೆ ತಲೆಕೆಡಿಸಿಕೊಂಡವರಲ್ಲ. ಅವರು ಯಾವ ಸಭೆಗಳಿಗೂ ಹೋಗಲಿಲ್ಲ., ಯಾವ ಪ್ರವಚನವನ್ನೂ ನೀಡಲಿಲ್ಲ. ಪುಸ್ತಕಗಳು, ವೃತ್ತಪತ್ರಿಕೆಗಳಿಗೂ ಅವರಿಗೂ ಯಾವ ಸಂಬಂಧವೂ ಇರಲಿಲ್ಲ. ಅವರು ಯಾರ ಸಹಾಯವನ್ನೂ ಪಡೆಯದೆ, ಕೇವಲ ವ್ಯಾಕುಲತೆಯಿಂದ ಆಧ್ಯಾತ್ಮಿಕ ಜೀವನದ ಔನ್ನತ್ಯವನ್ನು ಹೇಗೆ ಮುಟ್ಟಬಹುದು ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟರು. ಹಂಸವೊಂದು ನೀರನ್ನು ತಿರಸ್ಕರಿಸಿ, ಹೇಗೆ ಹಾಲನ್ನು ಮಾತ್ರ ಸ್ವೀಕರಿಸುವುದೋ ಹಾಗೆಯೇ, ಪರಮಹಂಸರು ಹಿಂದೂ ಧರ್ಮದ ತಿರುಳನ್ನು ತೆಗೆದು ತೋರಿಸಿದರು, ಜೊಳ್ಳುಗಳನ್ನೆಲ್ಲ ತಿರಸ್ಕರಿಸಿದರು. –ಗಿರೀಶ್ ಚಂದ್ರ ಘೋಷ್**

ವೇದಗಳ ಕಾಲದಿಂದಲೂ ಭಾರತೀಯರು ಗುರುವನ್ನು ತ್ರಿಮೂರ್ತಿಗಳ ಸಂಗಮರೂಪವೆಂದು ಭಾವಿಸುತ್ತ, ಪೂಜಿಸುತ್ತ ಬಂದಿದ್ದಾರೆ. ಜನನಮರಣರಹಿತವಾದ ಮುಕ್ತಿಮಾರ್ಗದಲ್ಲಿ ಸಾಗಲು ಅವನ ಮಾರ್ಗದರ್ಶನವೇ ಬೇಕು. ಈ ಪರಿಯ ಆಧ್ಯಾತ್ಮಿಕ ಸಾಧನೆಯನ್ನು ಸದ್ಗುರುವಿನ ಮಾರ್ಗದರ್ಶನವಿಲ್ಲದೆ ಸ್ವತಂತ್ರವಾಗಿ ಕೈಗೊಳ್ಳಬಾರದು ಎಂಬ ಕಟ್ಟಪ್ಪಣೆಯೂ ಇದೆ. "ಹೀಗೆ ಆಚಾರ್ಯೋಪಾಸನೆಯೇ ಕ್ರಮೇಣ ಅವತಾರವಾದಕ್ಕೆ ಮತ್ತು ಅದರ ಸಮರ್ಥನೆಗೆ ಸಹಾಯಕವಾಯಿತು" ಎಂದು ಸ್ವಾಮಿ ಶಾರದಾನಂದರು (ಶ್ರೀರಾಮಕೃಷ್ಣ ಲೀಲಾಪ್ರಸಂಗ, ಭಾಗ ೧, ಪು. ೪) ಸೂಕ್ತವಾಗಿಯೇ ಬರೆದಿದ್ದಾರೆ. ಪರಮಹಂಸರು ಅಂತಹ ಅವತಾರಿ ಸದ್ಗುರುವಾಗಿ ಲೋಕವನ್ನು ಮುನ್ನಡೆಸಿದರು.

### ಹೋರಾಟಗಳು ತೋರಿಕೆಯಲ್ಲ

"ಭಗವಂತನು ಜನ್ಮರಹಿತನೂ ನಾಶರಹಿತನೂ ಜೀವಿಗಳಿಗೆ ಒಡೆಯನೂ ನಿತ್ಯಶುದ್ಧ ಬುದ್ಧ ಮುಕ್ತ ಸ್ವಭಾವದವನೂ ಆಗಿದ್ದಾನೆ. ಹೀಗಿದ್ದರೂ ಶೋಕಮೋಹಗಳೆಂಬ ಮಹಾಸಮುದ್ರದಲ್ಲಿ ಮುಳುಗಿರುವವರಿಗೆ ಅನುಗ್ರಹ ಮಾಡುವ ಸಲುವಾಗಿ ಅವನು ತನ್ನ ಮಾಯೆಯಿಂದ ದೇಹವುಳ್ಳವನಂತೆಯೂ, ಹುಟ್ಟಿದವನಂತೆಯೂ, ಲೋಕಾನುಗ್ರಹವನ್ನು ಮಾಡುವವನಾಗಿಯೂ ಕಂಡುಬರುತ್ತಾನೆ" ಎಂದು ಶಂಕರಾಚಾರ್ಯರು ತಮ್ಮ ಗೀತಾಭಾಷ್ಯದ ಆರಂಭದಲ್ಲಿಯೇ ಬರೆದಿದ್ದಾರೆ. ಈ ಮಾತು ಅದ್ವೈತಸಿದ್ಧಿಯ ಪರಮೋಚ್ಚ ನೆಲೆಯಲ್ಲಿ ನಿಂತು ಹೇಳಿದ್ದಾಗಿದೆ. ವ್ಯಾವಹಾರಿಕ ಪಾತಳಿಯಲ್ಲಿ ಅವತಾರಿಯೂ ದೇಹವುಳ್ಳವನೇ, ಜನ್ಮ ತಳೆದವನೇ, ಸುಖದುಃಖಗಳಿಗೆ ಒಳಗಾದವನೇ! ಆದುದರಿಂದ ಅವತಾರಪುರುಷರು ಸತ್ಯಾನ್ವೇಷಿಗಳಾಗಿ ಆತ್ಮಸಾಕ್ಷಾತ್ಕಾರಕ್ಕಾಗಿ ನಡೆಸುವ ಹೋರಾಟಗಳೆಲ್ಲ ಕೇವಲ ತೋರಿಕೆ ಎಂದು ತಿಳಿಯಬಾರದು. ಅವರೂ ನಮ್ಮಂತೆಯೇ ಒಬ್ಬರು ಎಂದು ಭಾವಿಸಿದಾಗ ಮಾತ್ರ

ಅವರ ಅವತರಣದ ಆದರ್ಶವನ್ನು ನಾವೂ ಅನುಕರಿಸುವಂತೆ ನಮಗೆ ಪ್ರೇರಣೆ ಬರುತ್ತದೆ. "ನರಲೀಲೆಯಲ್ಲಿ ಎಲ್ಲ ಕಾರ್ಯಗಳೂ ಸಾಮಾನ್ಯ ಮನುಷ್ಯರದಂತೆಯೇ ಇರುತ್ತವೆ. ಭಗವಂತನು ನರ ದೇಹವನ್ನು ಧಾರಣ ಮಾಡಿದರೆ ನರರಂತೆಯೇ ಸುಖದುಃಖ ಗಳನ್ನು ಅನುಭವಿಸಬೇಕಾಗುತ್ತದೆ. ನರರಂತೆಯೇ ತಪಸ್ಸು, ಸಾಧನೆಗಳ ಮೂಲಕ ಪೂರ್ಣತೆಯನ್ನು ಪಡೆಯಬೇಕಾಗುತ್ತದೆ" ಎಂದು ಪರಮಹಂಸರೇ ಹೇಳಿರುವ ಮಾತನ್ನು ಈ ಸಂದರ್ಭದಲ್ಲಿ ಸ್ಮರಿಸಬೇಕು. ಅವತಾರಿಗಳು ಭಗವಂತನ ಕೃಪಾಛತ್ರದಲ್ಲಿರು ತ್ತಾರಾದರೂ ಪುರುಷ ಪ್ರಯತ್ನಕ್ಕೂ ಸ್ಥಾನವನ್ನು ಕಂಡುಕೊಳ್ಳುತ್ತಾರೆ. "ಅವತಾರಪುರುಷರು ಸ್ಥೂಲ ವಿಷಯಗಳಿಂದ ದೂರವಾಗಿದ್ದರೂ ಸೂಕ್ಷ್ಮವಾದ ವಾಸನೆಗಳೊಡನೆ ನಮ್ಮಂತೆಯೇ ಹೋರಾಡ ಬೇಕಾಗುತ್ತದೆ. ಒಂದೇ ಒಂದು ಕೆಟ್ಟ ಆಲೋಚನೆ ಮನಸ್ಸಿಗೆ ಬಂದರೂ ಅವರಿಗೆ ನಮಗಿಂತ ಅತ್ಯಧಿಕವಾದ ವೇದನೆ ಯುಂಟಾಗುತ್ತದೆ" ಎಂದು ಸ್ವಾಮಿ ಶಾರದಾನಂದರು ಪರಮ ಹಂಸರ ಅವತಾರದ ಸನ್ನಿವೇಶದಲ್ಲಿ (ಶ್ರೀರಾಮಕೃಷ್ಣ ಲೀಲಾ ಪ್ರಸಂಗ, ಭಾಗ ೧, ಪು.೯) ನಿರೂಪಿಸಿದ್ದಾರೆ. ಲೋಕಕ್ಕೆ ಮಾರ್ಗದರ್ಶನ ಮಾಡಬೇಕೆಂಬ 'ಲೋಕಸಂಗ್ರಹ' ವಿವೇಚನೆ ಯಿಂದಲೇ ಪರಮೇಶ್ವರನು ಪರಮಹಂಸರ ರೂಪದಲ್ಲಿ ಅವತರಿಸಿದನೆಂಬುದರಲ್ಲಿ ಎರಡು ಮಾತಿಲ್ಲ. ಆದ್ದರಿಂದಲೇ ಅವರು ತಮ್ಮ ಸರ್ವಶಕ್ತಿಯನ್ನು ಏಕಮುಖವಾಗಿ ಹರಿಸಿ ಬಹು ಬೇಗನೆ ಗುರಿ ಮುಟ್ಟಿದರು, ಸರ್ವಭೂತಗಳಲ್ಲಿಯೂ ಪರಮಾತ್ಮ ನನ್ನೇ ಕಂಡರು.

ಅವತಾರಿಗಳಲ್ಲಿ ದೇವಭಾವ–ಮಾನವಭಾವಗಳು, ಬಾಲ ಭಾವ–ಪ್ರೌಢಭಾವಗಳು ಸಂಕ್ರಮಣಗೊಂಡು ಆಗ ಒಂದು, ಈಗ ಒಂದು ಎಂಬಂತೆ ಪ್ರಕಟಣಗೊಳ್ಳುವುದರಿಂದ ಅವರನ್ನು ಅರ್ಥಮಾಡಿಕೊಳ್ಳುವುದೇ ದುಸ್ತರವಾಗುತ್ತದೆ. ಪರಮಹಂಸರ ಜೀವನಗತಿಯನ್ನು ಸಾವಧಾನವಾಗಿ ಮನನಮಾಡಿದರೆ ಅವತಾರಿ ಗಳ ಮೇಲಿನ ಈ ವಿಶಿಷ್ಟ ಲಕ್ಷಣವನ್ನು ಅರ್ಥೈಸಿಕೊಳ್ಳಲು ನಾವು ಸಮರ್ಥರಾಗುತ್ತೇವೆ; ಅವರು ದೇವ–ಮಾನವ ಭಾವಗಳ ಮಧುರ ಸಾಮಂಜಸ್ಯದ ಅಪೂರ್ವ ಸಂಗಮಭೂಮಿಯಾಗಿದ್ದ ರೆಂಬುದನ್ನು ಮನಗಾಣುತ್ತೇವೆ.

### ಸಾಧನೆಯ ವಿಪುಲ ವಿವರಗಳು

ಅವತಾರಪುರುಷರಾದ ಭಗವಾನ್ ಬುದ್ಧ ಮತ್ತು ಚೈತನ್ಯ ಮಹಾಪ್ರಭುಗಳನ್ನು ಹೊರತುಪಡಿಸಿದರೆ ಮಿಕ್ಕ ಅವತಾರಿಗಳ ಆಧ್ಯಾತ್ಮಿಕ ಸಾಧನೆಯ ಹೆಚ್ಚಿನ ವಿವರಗಳು ನಮಗೆ ಲಭ್ಯವಾಗಿಲ್ಲ. ಆದರೆ ಶ್ರೀರಾಮಕೃಷ್ಣರ ವಿಷಯದಲ್ಲಾದರೋ ಪ್ರಾಮಾಣಿಕವಾದ, ಸಮಕಾಲೀನವಾದ, ಐತಿಹಾಸಿಕವಾದ, ಚಿತ್ತಾಕರ್ಷಕವಾದ, ಬೋಧಪ್ರದವಾದ ವಿಪುಲ ವಿವರಗಳು ನಮಗೆ ಲಭ್ಯವಾಗಿವೆ. ಆ ಗುಂಪಿನಲ್ಲಿ ಮಾಸ್ಟರ್ ಮಹಾಶಯರೆನಿಸಿದ ಮಹೇಂದ್ರನಾಥ ಗುಪ್ತರ 'ಶ್ರೀರಾಮಕೃಷ್ಣ ವಚನವೇದ'ವು ಶಿರೋಮಣಿಯಿದ್ದಂತೆ. ಆ ಮಹಾಶಯರು ಪರಮಹಂಸರ ಆಪ್ತ ಗೃಹಸ್ಥ ಶಿಷ್ಯರಾಗಿದ್ದು ಅವರ ಸತ್ಸಂಗದ ವಾಣಿಯನ್ನೆಲ್ಲ ಹೃದಯಸ್ಪರ್ಶಿಯಾಗಿ ದಾಖಲಿಸಿ ದ್ದಾರೆ. ಜಗತ್ತಿನ ಇತಿಹಾಸದಲ್ಲಿಯೇ ಅದೊಂದು 'ಅಪೂರ್ವ ದಾಖಲೀಕರಣ' ಎಂದು ಹೇಳಿದರೆ ಉತ್ಪ್ರೇಕ್ಷೆಯಲ್ಲ. ಅದನ್ನು ಕುರಿತು ರಾಷ್ಟ್ರಕವಿ ಕುವೆಂಪು ಅವರು "ಅದೊಂದು ಕರತಲ ದೇವಸ್ಥಾನ, ಕರತಲ ತಪೋರಂಗ, ಕರತಲ ಪುಣ್ಯಕ್ಷೇತ್ರ" ಎಂದು ಕೊಂಡಾಡಿದ್ದಾರೆ. ಅದರ ತರುವಾಯ ಸ್ವಾಮಿ ಶಾರದಾನಂದರ 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ದ ಎರಡು ಸಂಪುಟಗಳನ್ನು ಉಲ್ಲೇಖಿಸಬೇಕು. ಅದರಲ್ಲಿ ಅವರು ಸಾವಿರ ಪುಟಗಳಷ್ಟು ವಿಸ್ತಾರ ವಾದ ವ್ಯಾಪ್ತಿಯಲ್ಲಿ ಪರಮಹಂಸರ ನೇರ ಶಿಷ್ಯರಾಗಿ ತಮ್ಮ ಸದ್ಗುರುವಿನ ಹುಟ್ಟು ಹೊಂದುಗಳನ್ನೆಲ್ಲ, ಸಾಧನೆ ಶೋಧನೆ ಬೋಧನೆಗಳನ್ನೆಲ್ಲ, ಅವತಾರ ವೈಶಿಷ್ಟ್ಯಗಳನ್ನೆಲ್ಲ, ಬಯಲು ಭೂಮಿಗೆ ಬಂದು ಶಾಂತವಾಗಿ ತುಂಬಿ ಹರಿಯುವ ಗಂಗಾ ಪ್ರವಾಹದಂತೆ ಹರಿಸಿಕೊಟ್ಟಿದ್ದಾರೆ. ಸ್ವಾಮಿ ಶಾರದಾನಂದರು ಕಸ್ತೂರಿ ಕನ್ನಡದಲ್ಲಿಯೇ ಬರೆದರೇನೋ ಎನ್ನುವಷ್ಟು ಮಟ್ಟಿಗೆ ಆ ಹೆಬ್ಬೊತ್ತಗೆಯನ್ನು ಸ್ವಾಮಿ ನಿತ್ಯಸ್ಥಾನಂದರು ಅನುವಾದಿಸಿ ಕೊಟ್ಟಿದ್ದಾರೆ.

ಈಶ್ವರಭಾವದ ಮಹಾಪ್ರವಾಹವು ಮಾನವಶರೀರದಲ್ಲಿ ಹರಿಯತೊಡಗಿದರೆ ಅದರ ಪ್ರಚಂಡ ವೇಗವನ್ನು ಸಹಿಸಿಕೊಳ್ಳ ಲಾರದೆ ಸಾಮಾನ್ಯರು ಜರ್ಜರಿತರಾಗುತ್ತಾರೆ. ಶುದ್ಧಸತ್ವವಿಗ್ರಹರಾದ ಪರಮಹಂಸರಂತಹ ಅವತಾರಿಗಳು ಮಾತ್ರ ಆ ವೇಗಾತಿಶಯತೆ ಯನ್ನು ದಕ್ಕಿಸಿಕೊಂಡು ಮುನ್ನಡೆಯಬಲ್ಲರೆಂಬುದನ್ನು ನಾವು ಆ ಯಮಳ ಕೃತಿಗಳಲ್ಲಿ ಮನಗಾಣುತ್ತೇವೆ.

### ಅಪೂರ್ವ ಶಿಷ್ಯಕೋಟಿ

ತಮ್ಮ ಜೀವಿತಕಾಲದಲ್ಲಿಯೇ ಪರಮಹಂಸರು ಅತ್ಯಂತ ಶ್ರೇಷ್ಠ ಶಿಷ್ಯರನ್ನು ಪಡೆದುಕೊಂಡರೆಂಬುದೂ ಅವರ ಅವತಾರ ಲೀಲೆಗಳಲ್ಲೊಂದು. ಆ ಶಿಷ್ಯರಿಗೆಲ್ಲ ಪರಮಹಂಸರು ಅವತಾರಿ ಗಳೆಂಬ ಸತ್ಯ ಗೋಚರವಾಯಿತು. ಆ ಶಿಷ್ಯರ ಮನೋಭೂಮಿಕೆಗೆ ತಕ್ಕಂತೆ, ಅಧಿಕಾರಿಭೇದಕ್ಕೆ ತಕ್ಕಂತೆ ಪರಮಹಂಸರು ಅವರವರ ಸಾಧನಾಪಥವನ್ನು ಪರಿಷ್ಕರಿಸಿಕೊಟ್ಟರು. ವಿವೇಕಾನಂದರಂತಹ ವೀರಸನ್ಯಾಸಿಯು ದೊರೆತುದಂತೂ ಗುರುಶಿಷ್ಯ ಸಂಬಂಧದ ಶ್ರೇಣಿಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ವಿಚಾರ. ಪರಮಹಂಸರು 'ಶಕ್ತಿಪಾತ'ದ ಮೂಲಕ ತಮ್ಮದೆಲ್ಲವನ್ನೂ ವಿವೇಕಾ ನಂದರಿಗೆ ಧಾರೆಯೆರೆದುಬಿಟ್ಟರು. "ದೇವರಿದ್ದರೆ, ಅವತಾರಗಳಿದ್ದರೆ, ಆ ನಿಷ್ಠುರ ಶಿಲಾಮೂರ್ತಿಗಳಿಗಿಂತ ಈ ನಗುವ, ಅಳುವ, ಜಗತ್ತಿನ ಹಿತಕ್ಕಾಗಿ ತನ್ನ ತಪಸ್ಸನ್ನು ಧಾರೆಯೆರೆದ ಮುಗ್ಧ ಅನಕ್ಷರಸ್ಥ ಮಹಾಪುರುಷನು ಸಹಸ್ರಾರು ಪಾಲು ಶ್ರೇಷ್ಠನಾದವನು ಎಂಬುದು ನನ್ನಂತಹವರ ಅಭಿಪ್ರಾಯ. ತಮ್ಮ ಅವತಾರದ ಉದ್ದೇಶವು ಪೂರೈಸಿದ ಕೂಡಲೇ, ಇತರ ಅವತಾರಗಳಂತೆ ಈ ಮಹಾಪುರುಷ ಅಂತರ್ಧಾನನಾಗಲಿಲ್ಲ. ತಮ್ಮ ಆಪ್ತಶಿಷ್ಯರ

ಮೂಲಕ ಅಧ್ಯಾತ್ಮ ಮತ್ತು ಸೇವೆಗಳೆರಡೂ ಒಂದೇ ನಾಣ್ಯದ ಎರಡು ಮುಖಗಳೆಂಬ ಸಂದೇಶವನ್ನು ಜಗತ್ತಿಗೆ ಸಾರಿದರು" ಎಂದು ಶ್ರೀ ಪ್ರಭುಶಂಕರರು (ಶ್ರೀರಾಮಕೃಷ್ಣ ಲೀಲಾಪ್ರಸಂಗಕ್ಕೆ ಬರೆದ ಮುನ್ನುಡಿ) ಆ ಅವತಾರವರಿಷ್ಠರ ವೈಶಿಷ್ಟ್ಯವನ್ನು ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ. ಪರಮಹಂಸರ ಅವತಾರ ವಿಶೇಷಕ್ಕೆ ಕೊರೆಯಿಸಿದ ಶಾಸನಗಳೋ ಎಂಬಂತೆ ಜಗತ್ತಿನಾದ್ಯಂತ ರಾಮಕೃಷ್ಣ ಮಠದ ಶಾಖೆಗಳು ದಾರಿತೋರುವ ದೀಪಸ್ತಂಭ ಗಳಾಗಿ ಬೆಳಗುತ್ತಿವೆ.

ಲೋಕಹಿತಕ್ಕಾಗಿ ಅವತರಿಸಿದ್ದರಿಂದ ಪರಮಹಂಸರು ಲೋಕ ಸುಖಕ್ಕಾಗಿ ಹಾತೊರೆಯಲಿಲ್ಲ. ನಿತ್ಯನಿರ್ಮಲರಾದ ಅವರು ಪಾಪಪುಣ್ಯಗಳೆಂಬ ಬಂಧನಕ್ಕೆ ತುತ್ತಾಗಲಿಲ್ಲ. ನಿತ್ಯಾನಿತ್ಯವಿವೇಕ ಸಂಪನ್ನರಾಗಿದ್ದುದರಿಂದ ಮಾಯೆ ಅವರನ್ನು ಬಂಧಿಸಲಿಲ್ಲ. ಇಹಲೋಕದಲ್ಲಾಗಲಿ, ಪರಲೋಕದಲ್ಲಾಗಲಿ ಸುಖಾನುಭವಸಂಪನ್ನ ರಾಗಬೇಕೆಂದು ಅವರು ಆಸೆ ಪಡಲಿಲ್ಲ. ಲೋಕಕಾರುಣ್ಯವೇ ತುಂಬಿತುಳುಕುತ್ತಿದ್ದುದರಿಂದ ಅವರು ಲೋಕವೈಪರೀತ್ಯಗಳಿಂದ ವಿಚಲಿತರಾಗಲಿಲ್ಲ. ಇಂದ್ರಿಯಗಳು ಚಂಚಲವಾಗದೆ ಅವರ ವಶವರ್ತಿಗಳಾಗಿ ಸಹಕರಿಸಿದುವು. ಈ ಅವತಾರವೈಶಿಷ್ಟ್ಯ ಗಳಿಂದಲೇ ಅವರು ಅಜರಾಮರರಾದರು.

### ಸಮನ್ವಯ ವರಿಷ್ಠ

ಪರಮಹಂಸರಿಗೆ ತಾವು ಅವತಾರಿಗಳೆಂದು ವೇದ್ಯವಾಗಿತ್ತು. ಅದರಿಂದೇನೂ ಅವರು ಉಬ್ಬಿ ನಡೆಯಲಿಲ್ಲ. ಹಿಂದಿನ ಶಾಸ್ತ್ರಗಳನ್ನು ಗೌರವಿಸಿ ಅವುಗಳಿಗೆ ಅವಿರೋಧವಾದ ಹೊಸ ಹಾದಿಯನ್ನು ಹಸನುಗೊಳಿಸಿಕೊಟ್ಟರು. 'ಎಷ್ಟು ಮತಗಳೋ ಅಷ್ಟು ಪಥಗಳು' ಎಂಬ ಅಪೂರ್ವ ಸತ್ಯವನ್ನು ಅವರು ಉದ್ಘೋಷಿಸಿದರು. ಸಾಧನೆಯಲ್ಲಿ ಅವರದು ಸಮನ್ವಯ ಮಾರ್ಗ. ಕ್ರೈಸ್ತ ತತ್ತ್ವ ಸಾಕ್ಷಾತ್ಕಾರದ ಮೂಲಕ ಅವರಿಗೆ ಏಸುವಿನ ದರ್ಶನ ವಾಯಿತು. ಇಸ್ಲಾಂ ಧರ್ಮದ ಸಾಧನೆ ಮಾಡಿ ಅದರ ತಿರುಳೇನು ಎಂದು ತಿಳಿದುಕೊಂಡರು. ಜೈನಧರ್ಮದ ತೀರ್ಥಂಕರರು, ಸಿಖ್ ಧರ್ಮದ ಗುರುನಾನಕ್ ಪರಂಪರೆಯ ಗುರುಗಳು ಮೊದಲಾದವರ ವಿಚಾರವನ್ನು ಅರಿತು ಅವರಲ್ಲಿ ಶ್ರದ್ಧೆಯುಳ್ಳವ ರಾಗಿದ್ದರು. ದ್ವೈತ, ವಿಶಿಷ್ಟಾದ್ವೈತ, ಅದ್ವೈತ ಎಂಬುವು ಪರಸ್ಪರ ವಿರೋಧಿಗಳಲ್ಲ, ಈ ಮೂರೂ ಆಧ್ಯಾತ್ಮಿಕ ಸಾಧನೆಯ ವಿವಿಧ ಮಜಲುಗಳು ಎಂಬುದನ್ನು ಅರಿತು ಬೋಧಿಸಿದರು. ಅವತಾರ ಪುರುಷರನ್ನು ಅವರು ತಮ್ಮ ಯೋಗದೃಷ್ಟಿಯಿಂದ ಗುರುತಿಸ ಬಲ್ಲವರಾಗಿದ್ದರು. "ಬುದ್ಧನು ನಿಜವಾಗಿಯೂ ಅವತಾರ ಪುರುಷನೇ; ಅವನ ಧರ್ಮಕ್ಕೂ ವೈದಿಕ ಜ್ಞಾನಮಾರ್ಗಕ್ಕೂ ಯಾವ ಭೇದವೂ ಇಲ್ಲ" ಎಂದು ಪ್ರಕಾಶಪಡಿಸಿದರು. ನವದ್ವೀಪಕ್ಕೆ ಹೋಗಿ ತಮಗಾದ ದಿವ್ಯದರ್ಶನಗಳ ಮೂಲಕ ಚೈತನ್ಯ ಮಹಾಪ್ರಭುವು ಅವತಾರಪುರುಷನೆಂಬುದನ್ನು ದೃಢಪಡಿಸಿ ಕೊಂಡು ಘೋಷಿಸಿದರು.

ಪುಷ್ಪದಿಂದ ಪುಷ್ಪಕ್ಕೆ ಮಂದಾನಿಲವು ಸಂಚರಿಸಿ ಪರಿಮಳ ವನ್ನು ಪಸರಿಸುವಂತೆ, ಮನುಷ್ಯ ಜೀವನವು ಸತ್ಯದಿಂದ ಸತ್ಯದೆಡೆಗೆ ಸಾಗುತ್ತ ಕೊನೆಗೆ ಪರಿವರ್ತನೆಗೊಳ್ಳದ ಅದ್ವೈತಸತ್ಯದಲ್ಲಿ ಒಂದಲ್ಲ ಒಂದು ದಿನ ನೆಲೆನಿಂತು ಧನ್ಯವಾಗಿಯೇ ತೀರುತ್ತದೆ ಎಂಬ ಅಭಯವಾಣಿಯನ್ನು ಪರಮಹಂಸರು ನೀಡಿದರು. ತಮ್ಮ ಸಮನ್ವಯಮಾರ್ಗದ ಸಾಧನೆಯಿಂದ ಮತಾಂಧತೆಯನ್ನು ಹಿಮ್ಮೆಟ್ಟಿಸಲು ಸಮರ್ಥರಾದರು. ವಿದೇಶೀಯರ ತಾತ್ಸಾರಕ್ಕೆ ತುತ್ತಾಗಿದ್ದಾಗ, ಅವರ ಪ್ರಚಾರಕ್ಕೆ ಮರುಳಾಗಿ ಭಾರತೀಯರು ತಮ್ಮನ್ನೇ ತಾವು ಹೀಗಳೆದುಕೊಳ್ಳುತ್ತಿದ್ದಾಗ, ಆತ್ಮವಿಶ್ವಾಸವನ್ನು ಬರಿದು ಮಾಡಿಕೊಂಡಿದ್ದಾಗ, ಅಸಹಾಯಕರಾಗಿ ಕೈಚೆಲ್ಲಿ ಕುಳಿತಿದ್ದಾಗ, ದಾರಿದ್ರ್ಯವಶರಾಗಿ ದುಃಖಿಸುತ್ತಿದ್ದಾಗ, ಅಜ್ಞಾನವಶರಾಗಿ ಕಂಗೆಟ್ಟಿದ್ದಾಗ, ಆಲಸ್ಯವಶರಾಗಿ ನಿದ್ರಿಸುತ್ತಿದ್ದಾಗ, ಶ್ರೀರಾಮಕೃಷ್ಣರು ಅವತಾರಿಗಳಾಗಿ ದೌರ್ಬಲ್ಯಗಳನ್ನೆಲ್ಲ ಗುಡಿಸಿಹಾಕಿ ಹೊಸ ಬೆಳಕನ್ನೂ ಹೊಸ ತಿಳಿವನ್ನೂ ನೀಡಿದರು. ಮೃತಪ್ರಾಯವಾಗಿದ್ದ ಭರತಖಂಡವು ಅವರ ಅವತಾರದಿಂದ ಹೊಸಜೀವಕಳೆಯಿಂದ ತುಂಬಿ ತುಳುಕಿತು ಎಂದು ಸ್ವಾಮಿ ಶಾರದಾನಂದರು ಬಿತ್ತರಿಸಿದ್ದಾರೆ (ಶ್ರೀರಾಮಕೃಷ್ಣ ಲೀಲಾಪ್ರಸಂಗ, ಭಾಗ ೨, ಪು. ೨೧೧). ಯಾವ ಸರ್ವೇಶ್ವರನು ರಾಮಾವತಾರಿಯಾಗಿ ಬಂದಿದ್ದನೋ, ಯಾವ ಸರ್ವೇಶ್ವರನು ಕೃಷ್ಣಾವತಾರಿಯಾಗಿ ಬಂದಿದ್ದನೋ, ಅವನೇ ಶ್ರೀರಾಮಕೃಷ್ಣ ಪರಮಹಂಸರಾಗಿ ಬಂದು ಲೋಕೋದ್ಧಾರ ಮಾಡಿದನು.

### ಅವತಾರ ತಿರೋಧಾನ

ಮಹೇಂದ್ರಲಾಲ್ ಸರ್ಕಾರ್ ಎಂಬ ವೈದ್ಯನು ಪರಮಹಂಸರು ಕಾಯಿಲೆ ಬಿದ್ದಾಗ ಚಿಕಿತ್ಸೆ ನೀಡುತ್ತಿದ್ದನು. ಅವತಾರವಾದದಲ್ಲಿ ಆತನಿಗೆ ವಿಶ್ವಾಸವಿರಲಿಲ್ಲ. ಆದರೆ ಪರಮಹಂಸರ ಸಮಾಧಿ ಸ್ಥಿತಿಯ ವೈಜ್ಞಾನಿಕ ಪರೀಕ್ಷೆ ನಡೆಸಿದಾಗ ಆತನು ತನ್ನ ಅಭಿಪ್ರಾಯ ವನ್ನು ಬದಲಿಸಿಕೊಂಡನು. "ಹೊರಗಡೆಯಿಂದ ನೋಡುವುದಕ್ಕೆ ಸಂಪೂರ್ಣವಾಗಿ ಮೃತಪಟ್ಟವರಂತೆ ಕಾಣುವ ಶ್ರೀರಾಮಕೃಷ್ಣರ ಸಮಾಧಿಯ ಅವಸ್ಥೆಯ ಬಗ್ಗೆ ವಿಜ್ಞಾನವೂ ಏನೂ ಹೇಳಲಾರದು" ಎಂದು ಅವನು ಘೋಷಿಸಿದನು. ಈ ಹಿಂದೆಯೇ ಭೈರವಿ ಬ್ರಾಹ್ಮಣಿಯು ರಾಮಕೃಷ್ಣರು ಅವತಾರಿಗಳೆಂಬುದನ್ನು ಸ್ಪಷ್ಟವಾಗಿ ಪ್ರತಿಪಾದಿಸಿದ್ದಳು.

"ನಾವು ಶ್ರೀರಾಮಕೃಷ್ಣರನ್ನು ಅವತಾರಪುರುಷರೆಂದು ಹೇಳುವಾಗ ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾ ನಂದರನ್ನೂ ಆ ಅವತಾರದ ಅಂಗವಾಗಿ ಸ್ವೀಕರಿಸಬೇಕಾಗುತ್ತದೆ. ಈ ಮೂವರು ಒಂದೇ ಅವತಾರದ ಮೂರು ಮುಖಗಳು ಎಂದು ನಾವು ಪರಿಗಣಿಸಬಹುದು. ಇವರಿಬ್ಬರನ್ನು ಹೊರತು ಪಡಿಸಿದರೆ ರಾಮಕೃಷ್ಣಾವತಾರವು ಅಪೂರ್ಣವಾಗಿಯೇ ಉಳಿ ಯುತ್ತದೆ" ಎಂಬ ಸ್ವಾಮಿ ನಿತ್ಯಸ್ಥಾನಂದರ ವಾಕ್ಯಗಳೊಂದಿಗೆ (ಪರಿಪೂರ್ಣ ವ್ಯಕ್ತಿತ್ವ, ಪು. ೯) ಈ ಲೇಖನವನ್ನು ಮುಕ್ತಾಯ ಗೊಳಿಸಬಹುದು.